# ಅಮೀರ್ ದಂತಕಥೆ



ಅಮೀರ್ ಖಾನ್ ಸಜ್ಜನ ನಟ ಎನ್ನುವುದು ಬಹುತೇಕ ಎಲ್ಲರಿಗೂ ಗೊತ್ತಿರುವ ಸಂಗತಿ. ಜೊತೆಗೆ ಆತನಿಗೆ 'ಪರ್ಫೆಕ್ಷನಿಸ್ಟ್' ಎನ್ನುವ ಇನ್ನೊಂದು ವಿಶೇಷಣವನ್ನೂ ಬಹಳಷ್ಟು ಜನ ಅಂಟಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಆತ ನಟಿಸುತ್ತಿರುವ ಚಿತ್ರಗಳಲ್ಲಿ ಆತ ಪೂರ್ಣವಾಗಿ ತೊಡಗಿಸಿಕೊಳ್ಳುತ್ತಿರುವುದು ಇದಕ್ಕೆ ಕಾರಣ. ಚಿತ್ರದ ಕಥೆಯನ್ನು ಆಯ್ಕೆ ಮಾಡಿಕೊಳ್ಳುವಾಗಲೇ ಅಮೀರ್ ಅತೀವ ಎಚ್ಚರಿಕೆಯನ್ನು ವಹಿಸುತ್ತಾನೆ. ಕಥೆ ಓಕೆ ಆದ ಬಳಿಕ ಚಿತ್ರಕಥೆಗೂ ದೀರ್ಘ ಅವಧಿ ತಗುಲುತ್ತದೆ. ನಿರ್ದೇಶಕರ ಮತ್ತು ಚಿತ್ರಕಥೆಗಾರರ ಜೊತೆಗೆ ಸ್ವತಃ ಕುಳಿತು ಚರ್ಚಿಸುವುದು, ಅದಕ್ಕಾಗಿ ತನ್ನದೇ ಆದ ಒಂದು ತಂಡವನ್ನು ಕಟ್ಟಿರುವುದು ಅಮೀರ್ ಎಷ್ಟು ವೃತ್ತಿಪರ ಎನ್ನುವುದನ್ನು ತೋರಿಸುತ್ತದೆ. ಈ ಮಧ್ಯೆ ತನ್ನ ಸಾಮಾಜಿಕ ಕಳಕಳಿಗಾಗಿಯೂ ಅಮೀರ್ ಹೆಸರು ಪಡೆದಿರುವುದು ಸುಳ್ಳಲ್ಲ. ಟೀವಿಯಲ್ಲಿ 'ಸತ್ಯಮೇವ ಜಯತೇ'ಯಂತಹ ರಿಯಾಲಿಟಿ ಷೋಗಳನ್ನು ನಡೆಸಿದ್ದು ಅಮೀರ್ ಕುರಿತು ಜನರಲ್ಲಿ ವಿಶಿಷ್ಟ ಕುತೂಹಲವನ್ನು ಮೂಡಿಸಿತ್ತು. ಇತ್ತೀಚಿನ ದಿನಗಳಲ್ಲಿ ಅಮೀರ್ ಸುತ್ತ ಕೆಲವು ದಂತಕಥೆಗಳೂ ಹುಟ್ಟಿಕೊಂಡಿವೆ. ಅದರಲ್ಲಿ ಒಂದು ಅಮೀರ್ ಗೋಧಿ ಹಿಟ್ಟಿನ ಬ್ಯಾಗ್‌ನಲ್ಲಿ ದುಡ್ಡು ಇಟ್ಟು ಹಂಚಿದ ಕಥೆ.

ಕಳೆದ ಮೂರ್ನಾಲ್ಕು ವಾರಗಳಿಂದ ಎಲ್ಲೆಡೆ ಸುತ್ತಾಡಿದ ಒಂದು ವಾಟ್ಸ್ಆ್ಯಪ್ ಮೆಸೇಜ್, ಅಮೀರ್ ಬಡವರಿಗೆ ತಲಾ ₹15 ಸಾವಿರ ದುಡ್ಡು ಹಂಚಿದ್ದಾನೆ ಎಂದು ಜಗಜ್ಜಾಹೀರು ಮಾಡಿದೆ. 'ಕೊಳೆಗೇರಿಯೊಂದರ ಬಳಿಗೆ ದೊಡ್ಡ ಲಾರಿಯಲ್ಲಿ ಅಮೀರ್ ಖಾನ್ ತಲಾ ಒಂದು ಕೇಜಿಯ ಗೋಧಿ ಹಿಟ್ಟಿನ ಲೋಡ್ ಕಳಿಸಿದ್ದಾರೆ. ಲಾರಿಯಲ್ಲಿ ಬಂದವರು, ಒಬ್ಬರಿಗೆ ಒಂದು ಕೇಜಿ ಗೋಧಿ ಮಾತ್ರ ನೀಡಲಾಗುತ್ತದೆ. ಬೇಕಾದವರು ಬಂದು ತಗೊಳ್ಳಿ.. ಎಂದಿದ್ದಾರೆ. ಬಹಳಷ್ಟು ಜನ ಅಯ್ಯೊ ಒಂದು ಕೇಜಿಯೇ ಎಂದು ಸುಮ್ಮನಿದ್ದರೆ ನಿಜಕ್ಕೂ ಅಗತ್ಯ ಇದ್ದ ಬಡವರು ಬಂದು ತೆಗೆದುಕೊಂಡು ಹೋಗಿದ್ದಾರೆ. ಅವರು ಮನೆಗೆ ಹೋಗಿ ನೋಡಿದರೆ ಆ ಒಂದು ಕೇಜಿ ಗೋಧಿ ಹಿಟ್ಟಿನ ಪ್ಯಾಕೆಟ್ ಒಳಗೆ ₹ 15,000 ದ ನೋಟುಗಳಿದ್ದವು'– ಇದು ಪ್ರಚಾರವಾದ ಸುದ್ದಿ. ವಾಟ್ಸ್ಆ್ಯಪ್, ಟಿಕ್‌ಟಾಕ್, ಫೇಸ್‌ಬುಕ್ ಎಲ್ಲೆಡೆ ಈ ಸುದ್ದಿ ಹರಿದಾಡಿದೆ. ನೋಡಿದವರು ನಮ್ಮ ಅಮೀರ್ ಖಾನ್ ನಿಜಕ್ಕೂ ಗ್ರೇಟ್ ಎಂದು ಹೊಗಳಿದ್ದಾರೆ.

ಅಮೀರ್‌ಖಾನ್ ಕಡೆಯಿಂದ ಈ ವಿಷಯಕ್ಕೆ ಸಂಬಂಧಿಸಿ ಯಾವ ಸ್ಪಷ್ಟನೆಯೂ ಬಂದಿಲ್ಲ. ಆದರೆ ಕೆಲವು ಪತ್ರಕರ್ತರು ಈ ಸುದ್ದಿಯ ಬೆನ್ನು ಹತ್ತಿದಾಗ 'ಇಂತಹ ಘಟನೆ ನಡೆದೇ ಇಲ್ಲ' ಎಂದು ಗೊತ್ತಾಗಿದೆ. 'ಕ್ರೇಜಿ ಟ್ರಾವೆಲರ್' ಎನ್ನುವ ಹೆಸರಿನ ವಿಡಿಯೊ ಒಂದರಲ್ಲಿ ಈ ರೀತಿ ಮಾಡಿದ ದಾನಿಯೊಬ್ಬರ ಬಗ್ಗೆ ಮೊದಲು ಪ್ರಚಾರವಾಗಿತ್ತು. ಆದರೆ ಅದರಲ್ಲಿ ದಾನಿಯ ಹೆಸರಿರಲಿಲ್ಲ. ಬಳಿಕ ಅಭಿಮಾನಿಗಳ್ಯಾರೋ ಇದನ್ನು ಅಮೀರ್‌ಖಾನ್ ತಲೆಗೆ ಅಂಟಿಸಿದ್ದಾರೆ. ವಾಟ್ಸ್ಆ್ಯಪ್‌ನಲ್ಲಿ ಹರಿದಾಡಿದ ವಿಡಿಯೋಗಳಲ್ಲಿ ಒಂದು ಕೆಜಿ ಗೋಧಿ ಹಿಟ್ಟಿನ ಪ್ಯಾಕೆಟ್‌ನಲ್ಲಿ ನೋಟುಗಳ ಪ್ಯಾಕ್ ಇರುವುದನ್ನೂ ತೋರಿಸಿದ್ದಾರೆ. ಪಕ್ಕದಲ್ಲೇ ಅಮೀರ್‌ಖಾನ್‌ನ ಫೋಟೊ ಅಂಟಿಸಲಾಗಿದೆ.

ವಿವಾದ, ದಂತಕಥೆಗಳು ಅಮೀರ್‌ಗೆ ಹೊಸತಲ್ಲ. ಈ ಹಿಂದೆ 'ಪಿಕೆ' ಸಿನಿಮಾ ಬಂದಾಗ ದೇವರ ಭಕ್ತರು ಅಮೀರ್ ಮೇಲೆ ಸಿಟ್ಟಿಗೆದ್ದಿದ್ದರು. ಆ ಸಿನಿಮಾದಲ್ಲಿ ದೈವಭಕ್ತರ ಡಾಂಭಿಕತನವನ್ನು ಲೇವಡಿ ಮಾಡಿದ್ದು ಅದಕ್ಕೆ ಕಾರಣವಾಗಿತ್ತು. ನಿರ್ದೇಶಕ ಹಿರಾನಿ ಮತ್ತು ಅಮೀರ್ ನಿವಾಸಕ್ಕೆ ಆಗ ಪೊಲೀಸ್ ಭದ್ರತೆಯನ್ನೂ ನೀಡಲಾಗಿತ್ತು. ಇನ್ನೊಂದೆಡೆ ಆ ಚಿತ್ರದ ಅಮೀರ್‌ನ ಅರೆನಗ್ನ ಚಿತ್ರದ ಪೋಸ್ಟರ್ ವಿರುದ್ಧವೂ ಆಕ್ರೋಶ ಭುಗಿಲೆದ್ದಿತ್ತು. ಆದರೆ ಚಿತ್ರರಸಿಕರು ಆ ವಿಡಂಬನೆಯ ಸಿನಿಮಾವನ್ನು ಸೂಪರ್‌ಹಿಟ್ ಮಾಡಿದ್ದರು.

ಚಿತ್ರರಂಗದ ಪ್ರಶಸ್ತಿ ಸಮಾರಂಭಗಳಿಗೆ ಗೈರುಹಾಜರಾಗುವುದು ಅಮೀರ್ ಖಾನ್ ಪಾಲಿಸಿಕೊಂಡು ಬಂದಿರುವ ಇನ್ನೊಂದು ನಿಯಮ. 'ಬಾಲಿವುಡ್ ಪ್ರಶಸ್ತಿಗಳ ಬಗ್ಗೆ ನನಗೆ ಗೌರವವಿಲ್ಲ. ಆದ್ದರಿಂದ ಸಮಾರಂಭಗಳಿಗೆ ಹಾಜರಾಗುವುದಿಲ್ಲ' ಎಂದು ಅಮೀರ್ ಹೇಳಿದ್ದಾನೆಂದು ದೊಡ್ಡದೊಂದು ವಿವಾದ ಹಿಂದೊಮ್ಮೆ ಹುಟ್ಟಿಕೊಂಡಿತ್ತು. ಅದಕ್ಕೆ ಸ್ಪಷ್ಟನೆ ನೀಡಿದ್ದ ಅಮೀರ್, 'ರಾಷ್ಟ್ರಪ್ರಶಸ್ತಿ ಬಿಟ್ಟರೆ ಬೇರೆ ಸಿನಿಮಾ ಪ್ರಶಸ್ತಿಗಳ ಬಗ್ಗೆ ನನಗೆ ನಂಬಿಕೆ ಇಲ್ಲ. ನಂಬಿಕೆ ಇಲ್ಲದ ಪ್ರಶಸ್ತಿಗಳನ್ನು ಸ್ವೀಕರಿಸುವುದು ಹೇಗೆ?' ಎಂದಿದ್ದ. ಮ್ಯಾಡಮ್ ಟುಸ್ಸೇಡ್ ಮ್ಯೂಸಿಯಂನಲ್ಲಿ ತನ್ನ ಮೇಣದ ಪ್ರತಿಕೃತಿ ಇಡುವುದಕ್ಕೂ ಅಮೀರ್ ಸಮ್ಮತಿ ನೀಡದೇ ಇರುವುದು ಇನ್ನೊಂದು ಸುದ್ದಿ. 'ನರ್ಮದಾ ಬಚಾವೊ' ಆಂದೋಲನದ ರೂವಾರಿ ಮೇಧಾ ಪಾಟ್ಕರ್ ಅವರ ಸತ್ಯಾಗ್ರಹವನ್ನು ಬೆಂಬಲಿಸಿದ್ದಕ್ಕೆ ಅಮೀರ್ ಮೇಲೆ ಆಳುವ ಪಕ್ಷದ ಬೆಂಬಲಿಗರು ಟೀಕಾಪ್ರಹಾರ ನಡೆಸಿದ್ದೂ ಉಂಟು.

ಗೋಧಿ ಹಿಟ್ಟಿನ ಪ್ಯಾಕೆಟ್‌ನಲ್ಲಿ ದುಡ್ಡು ಇಟ್ಟ ಸುದ್ದಿ ಅಮೀರ್ ಹೇಗೆ ಚಿತ್ರರಂಗದಲ್ಲಿ 'ದಂತಕಥೆ'ಯ ಮಟ್ಟಕ್ಕೆ ಬೆಳೆದಿದ್ದಾನೆ ಎನ್ನುವುದಕ್ಕೆ ಸಾಕ್ಷಿಯಂತಿದೆ. ಆ ಸುದ್ದಿ ಸುಳ್ಳು. ಆದರೆ ಕೋವಿಡ್ ಸಂಕಷ್ಟದ ಕಾಲದಲ್ಲಿ ಅಮೀರ್ ಪ್ರಧಾನಿಯವರ ಪಿಎಂ ಕೇರ್ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಯ ಸಂತ್ರಸ್ತರ ನಿಧಿಗೆ ದೊಡ್ಡ ಮೊತ್ತದ ಕೊಡುಗೆ ಕೊಟ್ಟಿದ್ದಾರೆ ಎನ್ನುವುದು ಸುಳ್ಳಲ್ಲ. ಆದರೆ ಕೊಟ್ಟಿರುವ ದುಡ್ಡು ಎಷ್ಟು ಎನ್ನುವುದನ್ನು ಬಹಿರಂಗಪಡಿಸಲು ಅಮೀರ್ ಒಪ್ಪಿಲ್ಲ. ಅದೂ ಅಲ್ಲದೆ ಕಷ್ಟದಲ್ಲಿರುವ ಬಾಲಿವುಡ್‌ನ ದಿನಗೂಲಿ ನೌಕರರಿಗೂ ಅಮೀರ್ ಹಣಸಹಾಯ ಮಾಡಿದ್ದಿದೆ. ಆದರೆ ಅದನ್ನು ಯಾವುದೇ ಫೋಟೋದ ಮೂಲಕ ಆತ ಜಾಹೀರುಪಡಿಸಿಲ್ಲ ಎನ್ನುವುದು ಕುಟುಂಬದ ನಿಕಟವರ್ತಿಗಳ ವಿವರಣೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65